# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 178 |
| ಸದಸ್ಯರ ಹೆಸರು | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 14.02.2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರೈತರಿಗೆ ತತ್ಕಾಲ್ ಪೋಡಿಗಾಗಿ ಅರ್ಜಿ ಶುಲ್ಕವನ್ನು ಪಡೆದು, ದುರಸ್ತಿ ಮಾಡದೇ (ಅಳತೆ ಮಾಡದೇ) ಹಾಗೆ ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಹಾಗಾದಲ್ಲಿ, ಈ ರೀತಿ ವಿಲೇವಾರಿ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ತತ್ಕಾಲ್ ಪೋಡಿಗಾಗಿ ಸಲ್ಲಿಸಿರುವ ಅರ್ಜಿಗಳ ಪೈಕಿ ಅಳತೆ ಮಾಡದೆ ವಿಲೆವಾರಿ ಮಾಡಿರುವ ಪ್ರಕರಣಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಇ) | ಹದ್ದುಬಸ್ತು ಅಳತೆಗೆ ಅರ್ಜಿ ಶುಲ್ಕ ಪಾವತಿಸಿಕೊಂಡು ಅಳತೆ ಮಾಡದೆ ವಿಲೇವಾರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಈ) | ಹಾಗಾದಲ್ಲಿ, ಈ ರೀತಿ ಅಳತೆ ಮಾಡಿ, ವಿಲೇವಾರಿ ಮಾಡದಿರುವ ಹಾಗೂ ವಿಲೇವಾರಿ ಮಾಡಿದ ಪ್ರಕರಣಗಳ ಸಂಖ್ಯೆ ಎಷ್ಟು; (ಪ್ರತ್ಯೇಕವಾಗಿ ವಿವರ ನೀಡುವುದು) | ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ರೈತರು ಹದ್ದುಬಸ್ತು ಅಳತೆ ಕೋರಿ ಸಲ್ಲಿಸಿರುವ ಅರ್ಜಿಗಳ ಪೈಕಿ ಅರ್ಜಿಗಳ ಪೈಕಿ ಅಳತೆ ಮಾಡದೆ ವಿಲೆವಾರಿ ಮಾಡಿರುವ ಪ್ರಕರಣಗಳ ಜಿಲ್ಲಾವಾರು ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಉ) | ಯಾವ ಕಾಲಮಿತಿಯಲ್ಲಿ ಈ ರೀತಿಯ ನಿಯಮಬಾಹಿರ ಕ್ರಮವನ್ನು ತಡೆಗಟ್ಟಲಾ ಗುವುದು? | ಯಾವುದೇ ಅಳತೆ ಪ್ರಕರಣಗಳಲ್ಲಿ ಭೂಮಾಪಕರು ಸಂಬಂಧಿಸಿದ ಅರ್ಜಿದಾರರು / ಹಕ್ಕುದಾರರಿಗೆ ಮುಂಚಿತವಾಗಿ ನೋಟೀಸ್ ನೀಡಿ ನಿಗಧಿತ ದಿನಾಂಕರಂದು ಸ್ಥಳಕ್ಕೆ ಹಾಜರಾದ ಸಂದರ್ಭದಲ್ಲಿ;<br>1) ಹಕ್ಕಿನ ಬಗ್ಗೆ ಗೊಂದಲ ಮತ್ತು ಇನ್ನಿತರ ಕಾರಣದಿಂದ ಅಳತೆ ವೇಳೆ ಗಲಭೆ ಉಂಟಾಗುವುದರಿಂದ;<br>2) ಅರ್ಜಿದಾರರು ವಿವಿಧ ಕಾರಣಗಳಿಂದಾಗಿ ಈಗ ಅಳತೆ ಮಾಡದಂತೆ ಮತ್ತು ಅಳತೆ ಸ್ಥಗಿತಗೊಳಿಸುವಂತೆ ಮನವಿ ಸಲ್ಲಿಸುವುದರಿಂದ;<br>3) ಜಮೀನಿನಲ್ಲಿ ಎತ್ತರವಾದ ಬೆಳೆ ಇದ್ದು, ಅಳತೆ ಸಾಧ್ಯವಾಗದ ಕಾರಣ ಅರ್ಜಿದಾರರು ಪ್ರಕರಣ ವಿಲೇಗೊಳಿಸಲು ಕೋರಿದ ಮೇರೆಗೆ; |

| | | |
|---|---|---|
| | | 4) ಅರ್ಜಿದಾರರು ಮರಣ ಹೊಂದಿರುವುದು;<br>ಇತ್ಯಾದಿ ಕಾರಣಗಳಿಂದ ಅಂತಹ ಪ್ರಕರಣಗಳಲ್ಲಿ ಭೂಮಾಪಕರು ಅಳತೆ ಮಾಡದೆ ಕಡತಗಳನ್ನು ವಿಲೇವಾರಿ ಮಾಡುತ್ತಿರುತ್ತಾರೆ.<br>ಈ ರೀತಿಯಾಗಿ ಭೂಮಾಪಕರು ಅಳತೆ ಮಾಡದೆ ಕಡತವನ್ನು ವಿಲೇವಾರಿ ಕೋರಿದಲ್ಲಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ಸದರಿ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ನೈಜತೆಯನ್ನು ಖಾತರಿಪಡಿಸಿಕೊಂಡು ನಂತರ ಅರ್ಜಿಯನ್ನು ಲಾಗಿನ್ ನಲ್ಲಿ ವಿಲೇಗೊಳಿಸುವಂತೆ ಅವಕಾಶವನ್ನು ಕಲ್ಪಿಸಲಾಗಿದೆ. |

**ಸಂಖ್ಯೆ: ಕಂಇ 16 ಎಸ್‌ಎಸ್‌ಸಿ 2024.**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

| **ಅನುಬಂಧ-1** LCQ 178 | | | |
|---|---|---|---|
| ದಿನಾಂಕ 1-4-2023 ರಿಂದ 31-01-2024 ರವರೆಗೆ ಅಳತೆ ಮಾಡದೆ ವಿಲೇವಾರಿ ಮಾಡಿದ ತತ್ಕಾಲ್ ಪೋಡಿ ಮತ್ತು ಹದ್ದುಬಸ್ತು ಅರ್ಜಿಗಳ ವಿವರ | | | |
| ಕ್ರ. ಸಂ | ಜಿಲ್ಲೆ | ಅಳತೆ ಮಾಡದೆ ವಿಲೇವಾರಿ ಮಾಡಿರುವ **ತತ್ಕಾಲ್ ಪೋಡಿ** ಅರ್ಜಿಗಳ ಸಂಖ್ಯೆ | ಅಳತೆ ಮಾಡದೆ ವಿಲೇವಾರಿ ಮಾಡಿರುವ **ಹದ್ದುಬಸ್ತು** ಅರ್ಜಿಗಳ ಸಂಖ್ಯೆ |
| 1 | ಉಡುಪಿ | 2314 | 354 |
| 2 | ಉತ್ತರ ಕನ್ನಡ | 570 | 227 |
| 3 | ಕೊಡಗು | 134 | 99 |
| 4 | ಕೊಪ್ಪಳ | 1705 | 1179 |
| 5 | ಕೋಲಾರ | 2478 | 3155 |
| 6 | ಗದಗ | 372 | 194 |
| 7 | ಕಲಬುರಗಿ | 3408 | 483 |
| 8 | ಚಾಮರಾಜನಗರ | 1135 | 531 |
| 9 | ಚಿಕ್ಕಬಳ್ಳಾಪುರ | 1719 | 2561 |
| 10 | ಚಿಕ್ಕಮಗಳೂರು | 1863 | 331 |
| 11 | ಚಿತ್ರದುರ್ಗ | 2167 | 314 |
| 12 | ತುಮಕೂರು | 6019 | 3383 |
| 13 | ದಕ್ಷಿಣ ಕನ್ನಡ | 1606 | 161 |
| 14 | ದಾವಣಗೆರೆ | 2349 | 1872 |
| 15 | ಧಾರವಾಡ | 320 | 78 |
| 16 | ಬಳ್ಳಾರಿ | 693 | 962 |
| 17 | ಬಾಗಲಕೋಟೆ | 813 | 946 |
| 18 | ವಿಜಯಪುರ | 1579 | 1031 |
| 19 | ಬೀದರ್ | 2629 | 539 |
| 20 | ಬೆಂಗಳೂರು (ಗ್ರಾ) | 1732 | 1976 |
| 21 | ಬೆಂಗಳೂರು ಜಿಲ್ಲೆ | 1510 | 1962 |
| 22 | ಬೆಳಗಾವಿ | 3025 | 2193 |
| 23 | ಮಂಡ್ಯ | 5751 | 3338 |
| 24 | ಮೈಸೂರು | 3295 | 2596 |
| 25 | ಯಾದಗಿರ್ | 1525 | 777 |
| 26 | ರಾಮನಗರ | 2714 | 2216 |
| 27 | ರಾಯಚೂರು | 2288 | 444 |
| 28 | ವಿಜಯನಗರ | 544 | 456 |
| 29 | ಶಿವಮೊಗ್ಗ | 1174 | 631 |
| 30 | ಹಾವೇರಿ | 630 | 98 |
| 31 | ಹಾಸನ | 5001 | 1367 |
| **ಒಟ್ಟು** | | **63062** | **36454** |